ಅಸಲು ದಾವಾ ಸಂಖ್ಯೆ . 284 - 2013

ಪಿ.ಡಬ್ಲ್ಯೂ-3
ದಿಃ 24-09-2019
ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.
ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಯು ಕೆ ವಕೀಲರಿಂದಃ-

ನನ್ನ ಸ್ವತಃ ಊರು ಗುಡ್ಡೇಹಳ್ಳಿ . ಪ್ರಮಾಣ ಪತ್ರದಲ್ಲಿ ಶಿಕಾರಿಪುರ ತಾಲ್ಲೂಕಿನ ಹಿತ್ತಲ ಎಂದು ಬರೆಸಿರುತ್ತೇನೆ ಎಂದರೆ ಸರಿ . ನಾನು ಓಡಾಡಿಕೊಂಡಿರುತ್ತೇನೆಂದರು . ಪ್ರಮಾಣ ಪತ್ರದಲ್ಲಿ ಶಿವಪ್ಪ ದಿಃ 15-04-1983 ರಲ್ಲಿ ಶಿವಪ್ಪ ರವರ ಮಕ್ಕಳು ವಿಭಾಗ ಮಾಡಿಕೊಂಡಿದ್ದಾರೆ ಎಂದು ಬರೆಸಿರುತ್ತೇನೆ . ನಾನು ವಿಭಾಗ ಆದಾಗ ಹಾಜರಿದೆ . ವಿಭಾಗ ಪತ್ರವನ್ನು ತಯಾರಿಸಲಾಗಿತು ನಾನು ಅದಕ್ಕೆ ಸಹಿ ಮಾಡಿರುವುದಿಲ್ಲ . ವಿಭಾಗ ಆದ ಸಂದರ್ಭದಲ್ಲಿ ನಾನು ಅಲ್ಲಿ ಇದೇ ದಿನಾಂಕ ನೆನಪಿರುವುದಿಲ್ಲ 1983 ಇಸವಿಯಲ್ಲಿ ಆಗಿರುತ್ತದೆ ಎಂದರು . ಸಮಯ ಗೊತ್ತಿಲ್ಲ . ನಾನು 2 ನೇ ಪ್ರತಿವಾದಿಯ ಂ ವಿಶ್ವಾಸಿಕರೂ ಮತ್ತು ಸಂಬಂಧಿಕರು ಎಂದರೆ ಹೌದು . ವಾದಿಯು ಸಹ ನಮ್ಮಗೆ ಸಂಬಂಧಿಕರು . ವಿಭಾಜನೆ ಆದ ಸಂದರ್ಭದಲ್ಲಿ ಎಸ್ ರುದ್ರಪ್ಪ ಎಂಬುವವರು ಬಿಕಲಂದಾರರಾಗಿ ಪತ್ರವನ್ನು ಬರೆದಿರುತ್ತಾರೆ . ನಾಗಪ, ಶೇಖರಪ್ಪ , ನಂದಯ್ಯ , ಮತ್ತು ಇತರ ಊರಿನವರು ಇದ್ದರೂ ಸದರಿ 3 ಜನರು ವಿಭಾಗ ಪತ್ರಕ್ಕೆ ಸಹಿ ಮಾಡಿರುತ್ತಾರೆ . ವಿಭಾಗ ಪತ್ರದಲ್ಲಿ ಯಾವ ಆಸ್ತಿಗೆ ಯಾರಿಗೆ ಬಂದಿದೆ ಎಂದು ನನಗೆ ಈಗ ನೆನಪಿರುವುದಿಲ್ಲ . ವಿಭಾಗ ಪತ್ರದಂತೆ ಕೆಲವು ಜಮೀನುಗಳ ಖಾತೆ ಬದಲಾವಣೆ ಮಾಡಿ ಕೊಂಡಿರುತ್ತಾರೆ. ವಾದಿಯು ಯಾವ ಆಸ್ತಿ ಮೇಲೆ ದಾವೆ ಹೂಡಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿ ಸರಿಯಾಗಿ ಉತ್ತರಿಸದೆ ವಿಭಾಗ ಪತ್ರದಂತೆ ಖಾತೆ ಮಾಡಿಕೊಳ್ಳಲು ನಾನು ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ .

ಸದರಿ ದಾವೆ ಆಸ್ತಿಯನ್ನು ಶೇಖರಪ್ಪರವರು ಉಳುಮೆ ಮಾಡುತ್ತಿದ್ದಾರೆ . ವಿಭಾಗ ಪತ್ರವನ್ನು ಸೃಷ್ಟಿ ಮಾಡಿಕೊಂಡು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ . ನನಗೆ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಎಂದರೆ ಸರಿಯಲ್ಲ . ನಾನು ಸುಳ್ಳು ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಕಿದ್ದೇನೆಂದರೆ ಸರಿಯಲ್ಲ .

ಮರುವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಹೊನ್ನಾಳಿ.